ಸಿ.ಸಿ.ನಂ.2746/2025
ಸಿಡಬ್ಲ್ಯೂ: 04 ಪಿಡಬ್ಲ್ಯೂ: 04

**ಮೇ: ಪ್ರಧಾನ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ**
**ಬಸವನ-ಬಾಗೇವಾಡಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ಯಮನಪ್ಪ ಮಾದರ. |
| ತಂದೆಯ ಹೆಸರು | : | ರಾಮಣ್ಣ ಮಾದರ. |
| ವಯಸ್ಸು | : | 33 ವರ್ಷ. |
| ಉದ್ಯೋಗ | : | ಅಬಕಾರಿ ಪೇದೆ. |
| ವಾಸಸ್ಥಳ | : | ಬಸವನ ಬಾಗೇವಾಡಿ. |

**ಸಾಕ್ಷಿಯನ್ನು ಇಂದು ದಿನಾಂಕ: 16-05-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**

**ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ**

1) ದಿನಾಂಕ: 10-07-2025 ರಂದು ಸಾಯಂಕಾಲ 5-00 ಗಂಟೆಗೆ ನಾನು ಕಛೇರಿಯಲ್ಲಿದ್ದಾಗ, ಚಾಸಾ-1 ರವರಿಗೆ ಬಾತ್ಮಿ ಬಂದಿದ್ದು ಇರುತ್ತದೆ. ನಂತರ, ನಾನು, ಚಾಸಾ-1, ಚಾಸಾ-2 ಮತ್ತು 3 ರವರು ಕೂಡಿಕೊಂಡು ನಮ್ಮ ಕಛೇರಿ ವಾಹನ ಸಂಖ್ಯೆ KA-28/G-0575 ನೇದ್ದರಲ್ಲಿ ಬಸವನ ಬಾಗೇವಾಡಿ ತಾಲೂಕಿನ ಬೂದಿಹಾಳ ಗ್ರಾಮದಿಂದ ಶರಣಸೋಮನಾಳ ಗ್ರಾಮದ ಡಾ||ಬಿ.ಆರ್.ಅಂಬೇಡ್ಕರ್ ಸರ್ಕಲ್ ಹತ್ತಿರ ಹೋಗುತ್ತಿದ್ದಂತೆ, ಒಬ್ಬ ಮೋಟಾರ್ ಸೈಕಲ್ ಸವಾರನು ನಮ್ಮ ವಾಹನವನ್ನು ನೋಡಿ ಮೋಟಾರ್ ಸೈಕಲ್ ಅನ್ನು ರಸ್ತೆಯ ಮೇಲೆ ಬಿಟ್ಟು ಗ್ರಾಮದ ಉತ್ತರ ದಿಕ್ಕಿನ ಸಂದಿಗಳಲ್ಲಿ ಓಡಿಹೋದನು. ಸಂಶಯಗೊಂಡ ನಾವು ಸದರಿ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದರೂ ಸಹ ಆತನು ರಭಸವಾಗಿ ಓಡಿ ಹೋಗಿ ಪರಾರಿಯಾದನು. ನಂತರ ಮೋಟಾರ್ ಸೈಕಲ್ ಬಿಟ್ಟು ಹೋದಂತಹ ಸ್ಥಳಕ್ಕೆ ಬಂದು ಹತ್ತಿರ ನಿಂತಿದ್ದ ಸ್ಥಳೀಯರನ್ನು ಕರೆದು ಪಂಚರಾಗಲು ಕೇಳಿದಾಗ, ಅವರು ನಿರಾಕರಿಸಿರುತ್ತಾರೆ. ಆಗ ಚಾಸಾ-2 ಮತ್ತು 3 ರವರಿಗೆ ಚಾಸಾ-1 ರವರು ನೋಟೀಸು ನೀಡಿ ಪಂಚರಾಗಲು ಹೇಳಿದಾಗ, ನಾವು ನೋಟೀಸುಗಳನ್ನು ಸ್ವೀಕರಿಸಿಕೊಂಡು ಪಂಚರಾಗಿ ಕಾರ್ಯನಿರ್ವಹಿಸಿರುತ್ತಾರೆ. ನಂತರ ಚಾಸಾ-1 ರವರು

ಶೋಧನಾ ಸಮೂಚಿತ ವರದಿಯನ್ನು ತಯಾರಿಸಿಕೊಂಡು ಚಾಸಾ-2 ಮತ್ತು 3 ರವರ ಸಹಿಗಳನ್ನು ಪಡೆದುಕೊಂಡು ಸದರಿ ಮೋಟಾರ್ ಸೈಕಲ್ ಅನ್ನು ಶೋಧನೆ ಮಾಡಲಾಗಿ ಸದರಿ ಮೋಟಾರ್ ಸೈಕಲ್ ನ ಪೆಟ್ರೋಲ್ ಟ್ಯಾಂಕ್ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ಅದನ್ನು ಬಿಚ್ಚಿ ಎಣಿಸಿ ನೋಡಲಾಗಿ ಅದರಲ್ಲಿ 90 ಎಮ್.ಎಲ್.ನ 70 ಓರಿಜಿನಲ್ ಚ್ವಾಯ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಇದ್ದು, ಅದರಂತೆ ಸದರಿ ಮೋಟಾರ್ ಸೈಕಲ್ ಸೈಡ್ ಬ್ಯಾಗಿನಲ್ಲಿ 180 ಎಮ್.ಎಲ್.ನ 10 ಬ್ಯಾಗ್ ಪೈಪರ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಇದ್ದು, 180 ಎಮ್.ಎಲ್.ನ ಮೂರು ಇಂಪಿರಿಯಲ್ ಬ್ಲ್ಯೂ ವಿಸ್ಕಿ ಮದ್ಯ ತುಂಬಿದ ಗಾಜಿನ ಬಾಟಲ್ ಗಳು ಇದ್ದು, ಒಟ್ಟು 8.640 ಲೀಟರ್ ಮದ್ಯ ಇರುವುದು ಕಂಡುಬಂದಿತು. ಆಗ ಸಮಯ ಸಾಯಂಕಾಲ 5-40 ಗಂಟೆಯಾಗಿತ್ತು. ನಂತರ ಸದರಿ ಮೋಟಾರ್ ಸೈಕಲ್ ಅನ್ನು ಪರಿಶೀಲನೆ ಮಾಡಲಾಗಿ ಅದು ಕೆಂಪು ಮತ್ತು ಕಪ್ಪು ಪಟ್ಟಿಯುಳ್ಳ ಹಿರೋ ಹೋಂಡಾ ಕಂಪನಿಯ ಪ್ಯಾಷನ್ ಪ್ರೋ ಮೋಟಾರ್ ಸೈಕಲ್ ಆಗಿದ್ದು, ಅದರ ನೋಂದಣಿ ಸಂಖ್ಯೆ KA-28/Y-7342 ನಮೂದು ಇರುವುದು ಕಂಡುಬಂದಿತು. ನಂತರ ಸದರಿ ಮೋಟಾರ್ ಸೈಕಲ್ ಹಾಗೂ ಮುದ್ದೇಮಾಲನ್ನು ವಶಕ್ಕೆ ಪಡೆದುಕೊಂಡು ನಂತರ ಸದರಿ ಮುದ್ದೇಮಾಲಿನಿಂದ 1 ರಿಂದ 90 ಎಮ್.ಎಲ್. 25 ಓರಿಜಿನಲ್ ಚ್ವಾಯ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು, 180 ಎಮ್.ಎಲ್.ನ 05 ಬ್ಯಾಗ್ ಪೈಪರ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು, 180 ಎಮ್.ಎಲ್.ನ ಮೂರು ಇಂಪಿರಿಯಲ್ ಬ್ಲ್ಯೂ ವಿಸ್ಕಿ ಮದ್ಯ ತುಂಬಿದ ಗಾಜಿನ ಬಾಟಲ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಶ್ಯಾಂಪಲ್ ತೆಗೆದು ಪ್ರತ್ಯೇಕವಾಗಿ ಶೀಲ್ ಮಾಡಲಾಯಿತು. ನಂತರ ಚಾಸಾ-1 ರವರ ಆದೇಶದಂತೆ ನಾನು ಕೃತ್ಯ ಕುರಿತು ಶೋಧನೆ ಮತ್ತು ಜಪ್ತಿ ಕಾರ್ಯವನ್ನು ವಿವೋ ಕಂಪನಿಯ Y-200E-5G ಮಾಡೇಲ್ ಮೊಬೈಲ್ ನಲ್ಲಿ ಫೋಟೋ ಮತ್ತು ವ್ಹಿಡಿಯೋಗ್ರಫಿ ಮಾಡಿರುತ್ತೇನೆ. ಘಟನಾ ಸ್ಥಳದ ಚಕಬಂದಿ: ಪೂರ್ವಕ್ಕೆ: ಪಂಚರ ಅಂಗಡಿ

ಇರುತ್ತದೆ, ಪಶ್ಚಿಮಕ್ಕೆ: ಡಾ|| ಬಿ.ಆರ್.ಅಂಬೇಡ್ಕರ್ ರವರ ಸರ್ಕಲ್ ಇರುತ್ತದೆ, ಉತ್ತರಕ್ಕೆ: ಖುಲ್ಲಾ ಜಾಗೆ ಇರುತ್ತದೆ ಹಾಗೂ ದಕ್ಷಿಣಕ್ಕೆ: ಗುಳಬಾಳ-ಶರಣಸೋಮನಾಳ ರಸ್ತೆ ಇರುತ್ತದೆ. ನಂತರ ಘಟನಾ ಸ್ಥಳದಲ್ಲಿ ಸಾಯಂಕಾಲ 5-40 ರಿಂದ 5-55 ಗಂಟೆವರೆಗೆ ಪಂಚನಾಮೆಯನ್ನು ಮಾಡಲಾಯಿತು. ಸದರಿ ಪಂಚನಾಮೆಯನ್ನು ಚಾಸಾ-1 ರವರ ನಿರ್ದೇಶನದಂತೆ ಚಾಸಾ-2 ರವರು ಬರೆದಿರುತ್ತಾರೆ. ನಂತರ ಅದೇ ದಿನ ಚಾಸಾ-7 ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

2) ಸಾಕ್ಷಿಗೆ ನಿಪಿ-4 ಘಟನಾ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಘಟನಾ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಇ) ಎಂದು ಗುರುತಿಸಲಾಯಿತು. ನಿಪಿ-11 ಪ್ರಮಾಣಪತ್ರದಲ್ಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 3 ಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ.SRD ವಕೀಲರಿಂದ</u>**

3) ಆ ದಿನ ಸಾಯಂಕಾಲ 5-00 ಗಂಟೆ ನಾವು ನಮ್ಮ ಕಛೇರಿಯನ್ನು ಬಿಟ್ಟಿರುತ್ತೇವೆ. ಶರಣಸೋಮನಾಳ ಗ್ರಾಮವನ್ನು ತಲುಪಿದಾಗ ಸಾಯಂಕಾಲ 5-35 ಗಂಟೆಯಾಗಿತ್ತು. ಆರೋಪಿತನು ಮೋಟಾರ್ ಸೈಕಲ್ ಅನ್ನು ಬಿಟ್ಟು ಓಡಿಹೋಗುವುದನ್ನು ನಾವೆಲ್ಲರೂ ನೋಡಿರುತ್ತೇವೆ. ಆ ದಿನ ಆರೋಪಿತನ ಮುಖವನ್ನು ಸ್ಪಷ್ಟವಾಗಿ ನೋಡಿರುವುದಿಲ್ಲ ಎಂದರೆ ನಿಜ. ಮೋಟಾರ್ ಸೈಕಲ್ ಮೇಲೆ ಇರುವ ಚೀಲವನ್ನು ಬಿಚ್ಚುವ ಪೂರ್ವದಲ್ಲಿಯೇ ಚಾಸಾ-1 ರವರು ಪಂಚರನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿರುತ್ತಾರೆ. ಮೋಟಾರ್ ಸೈಕಲ್ ಮೇಲೆ ಇರುವ ಚೀಲದ ಒಳಗಡೆ ಮದ್ಯದ ಬಾಟಲ್ ಗಳು ಹಾಗೂ ಪೌಚ್ ಪ್ಯಾಕೇಟ್

ಗಳು ಇರುತ್ತವೆ ಅಂತಾ ಮೇಲ್ನೋಟಕ್ಕೆ ನಮಗೆ ಸಂಶಯ ಬಂದಿರುತ್ತದೆ. ಪಂಚನಾಮೆಯನ್ನು ಬರೆಯಲು ಐದು ನಿಮಿಷಗಳ ಕಾಲ ಸಮಯ ಬೇಕಾಗಿರುತ್ತದೆ. ನಾವು ಘಟನಾ ಸ್ಥಳದಲ್ಲಿ ಐದು ನಿಮಿಷದ ಅವಧಿಯಲ್ಲಿ ಪಂಚರನ್ನು ಚಾಸಾ-1 ರವರು ನೇಮಕ ಮಾಡಿಕೊಳ್ಳಲು ಪ್ರಯತ್ನಿಸಿರುತ್ತಾರೆ, ಅಂತಿಮವಾಗಿ ಚಾಸಾ-2 ಮತ್ತು ಚಾಸಾ-3 ರವರು ಪಂಚರಾಗಿರುತ್ತಾರೆ. ನಾನು ಆ ದಿನ ಫೋಟೋಗ್ರಫಿ ಮತ್ತು ವ್ಹಿಡಿಯೋಗ್ರಫಿ ಮಾಡಿದಂತಹ ಮೊಬೈಲ್ ಸಂಖ್ಯೆಯನ್ನು ನಾನು ನನ್ನ ಹೇಳಿಕೆಯಲ್ಲಿ ನೀಡಿರುತ್ತೇನೆ ಹಾಗೂ ಪ್ರಮಾಣಪತ್ರದಲ್ಲಿ ಮತ್ತು ಪಂಚನಾಮೆಯಲ್ಲಿ ನಾನು ನನ್ನ ಸಹಿ ಮಾಡಿರುತ್ತೇನೆ. ಆದರೆ ಮೊಬೈಲ್ ನ ದಾಖಲೆಗಳನ್ನು ಚಾಸಾ-7 ರವರ ಮುಂದೆ ನಾನು ಹಾಜರುಪಡಿಸಿರುವುದಿಲ್ಲ. ಡಾ|| ಬಿ.ಆರ್.ಅಂಬೇಡ್ಕರ್ ಸರ್ಕಲ್ ನಲ್ಲಿ ಒಟ್ಟು ಮೂರು ರಸ್ತೆಗಳು ಬಂದು ಸೇರುತ್ತವೆ. ಆ ದಿನ ಆರೋಪಿ ತನ್ನ ಮೋಟಾರ್ ಸೈಕಲ್ ಬಿಟ್ಟು ಓಡಿಹೋದಂತಹ ಜಾಗದ ಚಕಬಂದಿಯನ್ನು ನಾನು ಹೇಳಬಲ್ಲೆ. ನಿಪಿ-11 ರಂತಿರುವ ಪ್ರಮಾಣಪತ್ರದಲ್ಲಿ ಸಂಪೂರ್ಣವಾದಂತಹ ಮಾಹಿತಿಯನ್ನು ಬರೆದಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 3 ರಂತಿರುವ ಮುದ್ದೇಮಾಲುಗಳು ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತಹ ಎಲ್ಲ ವಿಷಯಗಳು ಸುಳ್ಳು ಇವೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿತನು ಯಾವುದೇ ಆರೋಪ ಮಾಡಿಲ್ಲದಿದ್ದರೂ ಸಹ, ಚಾಸಾ-1 ರವರು ನಮ್ಮ ಮೇಲಾಧಿಕಾರಿಗಳು ಆಗಿರುವುದರಿಂದ, ಅವರ ಮಾತು ಕೇಳಿಕೊಂಡು ಆರೋಪಿತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ**

**ಸಿ.ಸಿ.ನಂ.2746/2025**
**ಸಿಡಬ್ಲ್ಯೂ: 04 ಪಿಡಬ್ಲ್ಯೂ: 04**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಅದೆ

ಪ್ರಧಾನ  ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.